**Anti Land-Grabbing Action Committee**
# ಭೂಕಬಳಿಕೆ ವಿರೋಧಿ ಹೋರಾಟ ಸಮಿತಿ
**No. 759, 5th Main, 8th Cross, R.T.Nagar, II Block, Bangalore 560032 Ph: 094481 20305**
**Website : http://savekarnataka.in email: karnatakasave@gmail.com**

---

**09.12.2016**

ಗೆ,
ಸನ್ಮಾನ್ಯ ಶ್ರೀ ಕಾಗೋಡು ತಿಮ್ಮಪ್ಪನವರು
ಗೌರವಾನ್ವಿತ ಕಂದಾಯ ಮಂತ್ರಿಗಳು,
ಕರ್ನಾಟಕ ಸರ್ಕಾರ, ವಿಧಾನ ಸೌಧ, ಬೆಂಗಳೂರು.

ಮಾನ್ಯರೆ,

ವಿಷಯ: ಕೃಷಿ ಭೂಮಿಯನ್ನು ಕೃಷಿಯೇತರ ಉದ್ದೇಶಕ್ಕಾಗಿ ಉಪಯೋಗಿಸುವಾಗ, ಎಲ್ಲಾ ರೀತಿಯ ನಿಯಮಗಳನ್ನು ಉಲ್ಲಂಘಿಸಿ ಸರ್ಕಾರದ ಬೊಕ್ಕಸಕ್ಕೆ ಸಾವಿರಾರು ಕೋಟಿ ರೂಪಾಯಿ ನಷ್ಟವಾಗಿರುವ ಬಗ್ಗೆ.
ಉಲ್ಲೇಖ: ದಿನಾಂಕ 10.01.2007ರಂದು ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಿಗೆ ಬರೆದಿರುವ ಪತ್ರ.

ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ 08.12.2016 ರಂದು ಕರ್ನಾಟಕ ಸರ್ಕಾರದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಪತ್ರಿಕಾ ಗೋಷ್ಠಿ ನಡೆಸಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಕಾನೂನುಬಾಹಿರವಾಗಿ, ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಮಾರು 300 ಕೋಟಿಗೂ ಹೆಚ್ಚಿನ ಹಣ ಸರ್ಕಾರಕ್ಕೆ ವಂಚನೆಯಾಗಿರುವುದಾಗಿ ತಿಳಿಸಿರುತ್ತಾರೆ.

ನಾನು ದಿನಾಂಕ 10.01.2007ರಂದು ಸರ್ಕಾರಕ್ಕೆ ಪತ್ರ ಬರೆದು ಕೃಷಿ ಭೂಮಿಯನ್ನು ಕೃಷಿಯೇತರ ಚಟುವಟಿಕೆಗಳಿಗಾಗಿ ಬಳಸಿಕೊಳ್ಳುವಾಗ ಇರುವ ಎಲ್ಲಾ ನಿಯಮಗಳನ್ನು ಉಲ್ಲಂಘಿಸಿ ಸರ್ಕಾರದ ಬೊಕ್ಕಸಕ್ಕೆ ಸಾವಿರಾರು ಕೋಟಿ ರೂಪಾಯಿ ಆದಾಯವನ್ನು ನಷ್ಟ ಮಾಡುತ್ತಿದ್ದು, ಆ ಬಗ್ಗೆ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದ್ದೆನು. ಸರ್ಕಾರ ಆ ಬಗ್ಗೆ ಗಮನ ಹರಿಸಿದ್ದರೆ, ಅಲ್ಲಿಂದ ಇಲ್ಲಿಯವರೆಗೆ ನಡೆದಿರುವ ವಂಚನೆಗಳನ್ನಾದರೂ ತಡೆಯಬಹುದಿತ್ತು. ಜಂಟಿ ಸದನ ಸಮಿತಿಯು 2007ರಲ್ಲಿಯೇ ಮಧ್ಯಂತರ ವರದಿಯ ಮೂಲಕ ಸರ್ಕಾರದ/ಇಲಾಖೆಯ ಗಮನಕ್ಕೆ ತಂದಿದ್ದರೂ, ಸರ್ಕಾರ /ಇಲಾಖೆಗಳು ಆ ಬಗ್ಗೆ ಗಮನ ಹರಿಸದಿರುವುದರಿಂದ ಮತ್ತಷ್ಟು ಅಕ್ರಮಗಳಾಗಲು ನೆರವಾಗಿರುವುದು ತುಂಬಾ ವಿಷಾಧನೀಯ.

ನಿಯಮಗಳನ್ನು ಅನುಸರಿಸದೆ ಮಾರಾಟಗಳಾಗುವುದರಿಂದ ಅಮಾಯಕರು, ಬಡವರು ತೊಂದರೆ ಅನುಭವಿಸುವಂತಾಗಿದೆ. ಸರ್ಕಾರದ ಬೊಕ್ಕಸಕ್ಕೂ ಸಾವಿರಾರು ಕೋಟಿ ರೂಪಾಯಿ ನಷ್ಟ ಉಂಟಾಗಿರುವುದಲ್ಲದೆ, ದಾಖಲೆಗಳನ್ನು ಸೃಷ್ಟಿಸಿಕೊಂಡು ಅಕ್ರಮವೆಸಗಿರುತ್ತಾರೆ.

ಆದುದರಿಂದ ದಯಮಾಡಿ ಈಗಲಾದರೂ ಪ್ರಾಸ್ತಾವಿಕ ವಿಷಯದ ಬಗ್ಗೆ ಗಮನ ಹರಿಸಿ ಕ್ರಮ ಕೈಗೊಳ್ಳಬೇಕೆಂದು ಮತ್ತೊಮ್ಮೆ ಕೋರುತ್ತೇವೆ.

ಈ ಸಂಗಡ ದಿನಾಂಕ 10.01.2007ರಂದು ಸರ್ಕಾರಕ್ಕೆ ಬರೆದ ಪತ್ರದ ಪ್ರತಿಯನ್ನು ಮಾಹಿತಿಗಾಗಿ ಲಗತ್ತಿಸಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

(ಎ.ಟಿ.ರಾಮಸ್ವಾಮಿ)
ಸಂಚಾಲಕರು

ಯಥಾ ನಕಲನ್ನು ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ:

1. ಸನ್ಮಾನ್ಯ ಶ್ರೀ ಸಿಧ್ಧರಾಮಯ್ಯನವರು, ಗೌರವಾನ್ವಿತ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ, ವಿಧಾನ ಸೌಧ, ಬೆಂಗಳೂರು.

2. ಸನ್ಮಾನ್ಯ ಶ್ರೀ ಎಚ್. ಕೆ. ಪಾಟೀಲ್ ರವರು, ಗೌರವಾನ್ವಿತ ಗ್ರಾಮೀಣಾಭಿವೃದ್ದಿ ಮತ್ತು ಪಂಚಾಯತ್ ರಾಜ್ ಮಂತ್ರಿಗಳು, ಕರ್ನಾಟಕ ಸರ್ಕಾರ, ವಿಧಾನ ಸೌಧ, ಬೆಂಗಳೂರು.

ಎ. ಟಿ. ರಾಮಸ್ವಾಮಿ
ಶಾಸಕರು ಹಾಗೂ ಅಧ್ಯಕ್ಷರು,
ಸದನ ಸಮಿತಿ (ಬೆಂಗಳೂರು ನಗರ ಮತ್ತು
ರು ನಗರ ಜಿಲ್ಲಾ ವ್ಯಾಪ್ತಿಯ ಸರ್ಕಾರಿ ಜಮೀನು
ಒತ್ತುವರಿ ಸಮಗ್ರ ತನಿಖಾ ಸಮಿತಿ)

ಸುವರ್ಣ ಕರ್ನಾಟಕ - ೨೦೦೬
ದೂರವಾಣಿ : ಕಛೇರಿ : 22250702
ಫ್ಯಾಕ್ಸ್ : 22258301
E-mail : atramaswamyjc@yahoo.co.in
ಕೊಠಡಿ ಸಂಖ್ಯೆ : 121, 1ನೇ ಮಹಡಿ,
ವಿಧಾನ ಸೌಧ, ಬೆಂಗಳೂರು - 560001

ದಿನಾಂಕ: 10.01.2007

ಮಾನ್ಯಶ್ರೀ ಜಾಮ್‌ದಾರ್‌ರವರೆ,

ವಿಷಯ: ಕೃಷಿ ಭೂಮಿಯನ್ನು ಕೃಷಿಯೇತರ ಉದ್ದೇಶಕ್ಕಾಗಿ ಉಪಯೋಗಿಸುವಾಗ ಸರ್ಕಾರವನ್ನು ವಂಚಿಸಿ ಬೊಕ್ಕಸಕ್ಕೆ ಅತೀವ ನಷ್ಟ ಉಂಟು ಮಾಡುತ್ತಿರುವ ಬಗ್ಗೆ.

* * *

ಸಮಿತಿಯು ಬೆಂಗಳೂರು ನಗರ ಹಾಗೂ ನಗರ ಜಿಲ್ಲೆಯ ವಿವಿಧ ಭಾಗಗಳಿಗೆ ಭೇಟಿಯಿತ್ತು ನಾನಾ ಇಲಾಖೆಗಳಿಗೆ ಸೇರಿದ ಭೂ ವ್ಯವಹಾರ ಹಾಗೂ ಬಳಕೆಯ ಬಗ್ಗೆ ಪರಿಶೀಲನೆ ನಡೆಸಿದೆ. ಈ ಸಂದರ್ಭದಲ್ಲಿ ಮತ್ತೊಂದು ಆತಂಕ ಹಾಗೂ ಆಘಾತಕಾರಿ ಅಂಶವನ್ನು ಗಮನಿಸಿದೆ.

ನಗರ ಅಥವಾ ಪಟ್ಟಣಗಳಲ್ಲಿ ಕೃಷಿ ಭೂಮಿಯನ್ನು ಕೃಷಿಯೇತರ ಉದ್ದೇಶಕ್ಕಾಗಿ ಉಪಯೋಗಿಸುವ ಮುನ್ನ ಜಾರಿಯಲ್ಲಿರುವ ನಿಯಮಗಳ ಪ್ರಕಾರ ಸಂಬಂಧಪಟ್ಟ ಪ್ರಾಧಿಕಾರದಿಂದ ಭೂ ಪರಿವರ್ತನೆ ಅಥವಾ ಅನ್ಯಕ್ರಾಂತ ಆದೇಶ ಪಡೆಯಬೇಕೆಂಬುದು ಸರ್ವವೇದ್ಯವಾದ ಅಂಶ. ಈ ರೀತಿ ಆದೇಶ ಪಡೆಯಬೇಕಾದರೆ ತನ್ನ ಹಕ್ಕನ್ನು ಸಾಬೀತು ಪಡಿಸಲು ಅರ್ಜಿದಾರ ಬಹು ಪ್ರಾಮುಖ್ಯವಾದ ಹಲವಾರು ದಾಖಲೆಗಳನ್ನು ಒದಗಿಸುವುದರ ಜೊತೆಗೆ ಸರ್ಕಾರಕ್ಕೆ ಶುಲ್ಕ ಹಾಗೂ ತೆರಿಗೆ ಪಾವತಿ ಮಾಡಬೇಕಾಗುತ್ತದೆ. ಇದರಿಂದ ತಪ್ಪಿಸಿಕೊಳ್ಳಲು ಭೂ ಪರಿವರ್ತನೆ ಆದೇಶ ಪಡೆಯದೆ ಅಥವಾ ಅನಿವೇಶನ ಗ್ರಾಮಠಾಣವೆಂದೋ ಖಾನೇಷುಮಾರಿ ಅಥವಾ ಮುನಿಸಿಪಾಲಿಟಿ ನಂಬರು ಸೃಷ್ಟಿಸುವುದು ಇಲ್ಲವೆ ನೋಂದಣಿ ಸಮಯದಲ್ಲಿ ಫಾರಂ ನಂ. 9 ಅಥವಾ 10ನ್ನು ಸುಳ್ಳು ದಾಖಲೆಯಾಗಿ ಒದಗಿಸಿ ಜಾರಿಯಲ್ಲಿರುವ ಎಲ್ಲಾ ನಿಯಮ ಪದ್ಧತಿಗಳಿಗೂ ತಿಲಾಂಜಲಿ ಇತ್ತು ಸರ್ಕಾರವನ್ನು ವಂಚಿಸುವುದಲ್ಲದೆ ಬೊಕ್ಕಸಕ್ಕೆ ಸಾವಿರಾರು ಕೋಟಿ ಆದಾಯವನ್ನು ನಷ್ಟ ಮಾಡುತ್ತಿರುವುದು ಬೆಳಕಿಗೆ ಬಂದಿದೆ.

ಬೆಂಗಳೂರು ನಗರ ಹಾಗೂ ನಗರಜಿಲ್ಲೆ ವ್ಯಾಪ್ತಿಯಲ್ಲಿ ಅನೇಕ ಬಡಾವಣೆಗಳು, ಕೈಗಾರಿಕಾ ಕೇಂದ್ರಗಳು, ವ್ಯಾಪಾರಿ ಮಳಿಗೆಗಳು, ವಸತಿಗೃಹಗಳು ಇತರೆ ಕಟ್ಟಡಗಳ ಮಾಲೀಕರು ಇಂತಹ ಅವ್ಯವಹಾರದಲ್ಲಿ ತೊಡಗಿ ಸರ್ಕಾರಕ್ಕೆ ಸಾವಿರಾರು ಕೋಟಿ ರೂ.ಗಳ ವಂಚನೆ ಎಸಗಿರುವುದನ್ನು ಗಮನಿಸಬಹುದಾಗಿದೆ.

ಈ ಕಾರಣ ಬೆಂಗಳೂರು ನಗರ ಹಾಗೂ ನಗರ ಜಿಲ್ಲೆಯ ವ್ಯಾಪ್ತಿಯಲ್ಲಿ ಪೂರ್ಣ ಪ್ರಮಾಣದ ಸಮೀಕ್ಷೆ ನಡೆಸಿ ಇಂತಹ ಅವ್ಯವಹಾರಗಳನ್ನು ಪತ್ತೆ ಹಚ್ಚಿ ಇದರಲ್ಲಿ ಶಾಮೀಲಾಗಿರುವ ವ್ಯಕ್ತಿಗಳ ವಿವರ ತಿಳಿಸುವುದರ ಜೊತೆಗೆ ಸರ್ಕಾರಕ್ಕೆ ಆಗಿರುವ ಆರ್ಥಿಕ ಹಾನಿ, ಒಟ್ಟು ವಿಸ್ತೀರ್ಣ, ಇದನ್ನು ಸರಿಪಡಿಸುವ ಬಗ್ಗೆ ಕೈಗೊಂಡಿರುವ ಕ್ರಮದ ಬಗ್ಗೆಯೂ ಒಂದು ಸ್ಪಷ್ಟ ವರದಿ ನೀಡಬೇಕಾಗಿ ಕೋರುತ್ತೇನೆ.

ತಮ್ಮ ವಿಶ್ವಾಸಿ,
ಸಹಿ/-

ಡಾ: ಎಸ್.ಎಂ.ಜಾಮ್‌ದಾರ್, ಭಾ.ಆ.ಸೇ.
ಪ್ರಧಾನ ಕಾರ್ಯದರ್ಶಿಗಳು,
ಕಂದಾಯ ಇಲಾಖೆ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು.